# ಸೇವೆಯೇ ಸಾಧನೆ


❑ ಸ್ವಾಮಿ ರಾಘವೇಶಾನಂದ

**ನಮ್ಮ ಬದುಕಿನಲ್ಲಿ ಸೇವೆಯ ಆದರ್ಶವನ್ನು ರೂಪಿಸಿಕೊಳ್ಳಲು ಶ್ರೀಮಾತೆಯವರ ದೈನಂದಿನದ ಬದುಕು ಹೇಗೆ ಸ್ಫೂರ್ತಿಯಾಗಬಲ್ಲದು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸಿರುವ ಸ್ವಾಮಿ ರಾಘವೇಶಾನಂದಜಿಯವರು ಬೆಂಗಳೂರಿನಲ್ಲಿರುವ ಅಲಸೂರಿನ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವರು.**

**ಸೇ**ವೆಯೆ ಸಾಧನೆ ಎಂಬ ತತ್ತ್ವವನ್ನು ಪ್ರಪಂಚಕ್ಕೆ ತಿಳಿಯಾಗಿ ತಿಳಿಸಿದವರು ಶ್ರೀರಾಮಕೃಷ್ಣರು. ಯಾವ ಪ್ರತಿಫಲವನ್ನೂ ಎದುರು ನೋಡದೆ, ದೇವರಿಗಾಗಿ ಮಾಡುತ್ತಿದ್ದೇನೆ ಎಂಬ ಮನಸ್ಸಿನಿಂದ ಮಾಡುವುದು, ಧ್ಯಾನದಷ್ಟೇ ಪ್ರಶಸ್ತವಾದ ಆಧ್ಯಾತ್ಮಿಕ ಸಾಧನೆಯಾಗುತ್ತದೆ.

ಒಮ್ಮೆ ಶ್ರೀರಾಮಕೃಷ್ಣರು ಭಾವಸ್ಥರಾಗಿ, "ಜೀವಿಗಳಿಗೆ ದಯೆ ತೋರಲು ನೀನ್ಯಾರು? ಅದು ದೇವರ ಕೆಲಸ. ನೀನು ಜೀವಿಗಳಿಗೆ ಸೇವೆ ಮಾತ್ರ ಮಾಡಬಲ್ಲೆ" ಎಂದರು. ಆಗ ಅಲ್ಲಿದ್ದ ನರೇಂದ್ರನು (ಮುಂದೆ ಸ್ವಾಮಿ ವಿವೇಕಾನಂದರು), "ಇಂದು ನಾನು ಅದ್ಭುತವಾದ ಸತ್ಯವನ್ನು ಅರಿತೆ. ಭಗವಂತನ ಇಚ್ಛೆ ಇದ್ದರೆ, ನಾನು ಈ ಘನ ಸತ್ಯವನ್ನು ಸಮಸ್ತ ಜಗತ್ತಿಗೇ ಸಾರುವ ದಿನವೊಂದು ಶೀಘ್ರದಲ್ಲೇ ಒದಗಿ ಬಂದೀತು. ನಾನು ಈ ಸತ್ಯವನ್ನು ಸರ್ವರ ಸ್ವತ್ತಾಗುವಂತೆ ಮಾಡುತ್ತೇನೆ. ಬುದ್ಧಿವಂತರು-ಮೂರ್ಖರು, ಶ್ರೀಮಂತರು-ದರಿದ್ರರು, ಬ್ರಾಹ್ಮಣರು-ದಲಿತರು ಎಲ್ಲರೂ ಈ ಸತ್ಯವನ್ನು ಅರಿಯುವಂತೆ ಮಾಡುತ್ತೇನೆ" ಎಂದು ಘೋಷಿಸಿದನು. ಇದನ್ನೇ ಮುಂದೆ ವಿವೇಕಾನಂದರು ಕರ್ಮಯೋಗ, ಅನುಷ್ಠಾನ ವೇದಾಂತ, ಮುಂತಾದ ಹೆಸರುಗಳಿಂದ ಪ್ರಪಂಚಕ್ಕೆ ಬೋಧಿಸಿದರು. ಶ್ರೀಮಾತೆ ಶಾರದಾದೇವಿಯವರ ಜೀವನವನ್ನು ನಾವು ನೋಡಿದಾಗ, ಈ ಸೇವೆಯೇ ಜೀವನವಿಡೀ ಅವರ ಸಾಧನೆಯ ಒಂದು ಅಂಗವಾಗಿರುವುದನ್ನು ಕಾಣುತ್ತೇವೆ. ಅತಿ ದುಃಖಕರವಾದ ಸನ್ನಿವೇಶಗಳನ್ನೂ, ಅವರು ಶಾಂತವಾಗಿ ಸುಖರೂಪದಲ್ಲಿ ಅನುಭವಿಸುವುದನ್ನು ಅವರ ಜೀವನದಲ್ಲಿ ಕಾಣುತ್ತೇವೆ.

ಅದಕ್ಕೆ ವಿರುದ್ಧವಾಗಿ ನಾವು, ಎಷ್ಟು ಅನುಕೂಲಗಳಿದ್ದರೂ, ಬೇರೆಯವರಲ್ಲಿ ದೋಷಗಳನ್ನು ಕಾಣುತ್ತಾ, ಗೊಣಗಾಡುತ್ತಾ, ಕೋಪಗೊಳ್ಳುತ್ತಾ ನಮ್ಮ ಮನೆಗೆಲಸಗಳನ್ನು ಮಾಡುತ್ತೇವೆ. ಕೆಲಸಗಳು ಬೇಗನೆ ಆಗಲೆಂದೂ, ಸುಲಭವಾಗಿ ಆಗಲೆಂದೂ ನಮ್ಮ ಅಡುಗೆ ಮನೆಯನ್ನು ಗ್ಯಾಸ್‌ಸ್ಟೋವ್, ಗ್ರೈಂಡರ್, ಮಿಕ್ಸಿ ಮುಂತಾದ ಆಧುನಿಕ ಸಲಕರಣೆಗಳಿಂದ ಅಲಂಕರಿಸಿ ಅವುಗಳ ಸಹಾಯದಿಂದ ಕೆಲಸ ಮಾಡುತ್ತೇವೆ. ಆದರೆ ಒಂದು ದಿನ ವಿದ್ಯುತ್‌ಶಕ್ತಿ ಇಲ್ಲದಿದ್ದಲ್ಲಿ ಅಥವಾ ಗ್ಯಾಸ್ ಮುಗಿದುಹೋದಲ್ಲಿ ಅಂದು ಪ್ರತಿಯೊಂದಕ್ಕೂ ಚಡಪಡಿಸುತ್ತಾ ಸಿಡಿಗುಟ್ಟುತ್ತಾ ಎಲ್ಲರ ಮೇಲೆ ಉರಿದು ಬೀಳುತ್ತೇವೆ. ಅನುಕೂಲತೆಗಳು ಹೆಚ್ಚಾದಷ್ಟೂ ನಮ್ಮ ನೆಮ್ಮದಿ ಕಡಮೆಯಾಗುತ್ತಿದೆ.



ಅದೇ ಶ್ರೀಮಾತೆಯವರನ್ನು ನೋಡಿದರೆ, ನಹಬತ್ ಎಂಬ ಚಿಕ್ಕ ಕೊಠಡಿಯಲ್ಲಿ ವರ್ಷಾನುಗಟ್ಟಳೆ ಬಾಳಿದರು. ಐವತ್ತು ಚದರ ಅಡಿಗಿಂತಲೂ ಕಮ್ಮಿಯಾದ ಆ ಜಾಗದಲ್ಲಿ ಮನಸ್ಸಿನಲ್ಲಿ ಆನಂದವನ್ನು ತುಂಬಿಕೊಂಡು ಶ್ರೀರಾಮಕೃಷ್ಣರ ಸೇವೆಯನ್ನು ಮಾಡಿದರು. ಆದರೂ ಅವರ ಭಾಷೆಯಲ್ಲೇ ಹೇಳುವುದಾದರೆ, "ದಕ್ಷಿಣೇಶ್ವರದಲ್ಲಿದ್ದಾಗ ನನ್ನ ಮನಸ್ಸಿನಲ್ಲಿ ಒಂದು ಆನಂದದ ಗಡಿಗೆಯೇ ತುಂಬಿ ಇಟ್ಟಂತೆ ಇತ್ತು."

ಮನಸ್ಸಿದ್ದಲ್ಲಿ ಮಾರ್ಗ ಎಂಬ ಗಾದೆಯನ್ನು ಬಾಳಿ ತೋರಿಸಿದರು ಶ್ರೀಮಾತೆ. ಅವರು ಬಾಳಿದ ಕೊಠಡಿಯಲ್ಲಿ ಸರಿಯಾಗಿ ಕಾಲು ನೀಡಿ ಮಲಗಲೂ ಜಾಗವಿರಲಿಲ್ಲ. ಅಕ್ಕಿ, ಬೇಳೆ, ತರಕಾರಿಯ ಬುಟ್ಟಿಗಳು ಒಂದು ಕಡೆ, ಅಲ್ಲದೆ ಶ್ರೀರಾಮಕೃಷ್ಣರ ಹೊಟ್ಟೆ ಸೂಕ್ಷ್ಮವಾಗಿದ್ದುದರಿಂದ ಅವರಿಗೆ ವಿಶೇಷವಾಗಿ ತಯಾರು ಮಾಡಲು ಬೇಕಾದ ಸಿಹಿಪದಾರ್ಥದ ಕೆಲವು ವಸ್ತುಗಳನ್ನು ಮಡಕೆಗಳಲ್ಲಿ ಇರುವೆ, ಇಲಿ ಇವುಗಳಿಂದ ಕಾಪಾಡಿಕೊಂಡು ಇಟ್ಟುಕೊಳ್ಳಬೇಕಾಗಿತ್ತು.

ಶ್ರೀಮಾತೆ ಹೇಳುತ್ತಿದ್ದರು: "ನಾನು ನಹಬತ್ತಿನಲ್ಲಿ ಇದ್ದು, ಶ್ರೀರಾಮಕೃಷ್ಣರಿಗೆ ಸೇವೆ ಮಾಡುತ್ತಿದ್ದ ದಿನಗಳಲ್ಲಿ ಆಗುತ್ತಿದ್ದ ಶ್ರಮ ಹೇಳತೀರದು. ಅಡುಗೆ, ಊಟ, ನಿದ್ರೆ ಎಲ್ಲವನ್ನೂ ಆ ಚಿಕ್ಕ ಕೋಣೆಯಲ್ಲೇ ಮಾಡಿಕೊಂಡು ಒಬ್ಬಂಟಿಗಳಾಗಿ ಹಲವಾರು ದಿನಗಳನ್ನು ಕಳೆದಿದ್ದೇನೆ...ಅಲ್ಲಿರುವ ಚಿಕ್ಕ ಬಾಗಿಲಿನ ಮೇಲ್ಕಟ್ಟನ್ನು ಅವಸರದಲ್ಲಿ ಹಲವಾರು ಬಾರಿ ಹಣೆಗೆ ಹೊಡೆಸಿಕೊಂಡಿದ್ದೇನೆ. ಕಲ್ಕತ್ತೆಯಿಂದ ಬರುತ್ತಿದ್ದ ಸ್ತ್ರೀ ಭಕ್ತರು ಆ ಕೋಣೆಯ ಬಾಗಿಲಲ್ಲಿ ನಿಂತು ಒಳಗೆ ಬಗ್ಗಿ ನೋಡಿ, 'ನಮ್ಮ ಹೆಣ್ಣು ಎಷ್ಟು ಚಿಕ್ಕ ಕೊಠಡಿಯಲ್ಲಿ ವಾಸಿಸುತ್ತಿದ್ದಾಳೆ! ಸೀತೆಯ ಸೆರೆವಾಸದಂತಿದೆಯಲ್ಲಾ,' ಎನ್ನುತ್ತಿದ್ದರು."

ಗುರುದೇವರಿಗೆ ಸೇವೆ ಮಾಡುವುದರ ಮೂಲಕವೇ ಶ್ರೀಮಾತೆ ಎಲ್ಲ ಶ್ರಮಗಳನ್ನೂ ಸಾಧನೆಯಾಗಿ ಮಾಡಿಕೊಂಡಿದ್ದರು. ಅವರು ಯಾರೂ ಗುರುತಿಸದ ರೀತಿಯಲ್ಲಿ, ಜನರ ಮನ್ನಣೆಯನ್ನು ಸ್ವಲ್ಪವೂ ಬಯಸದೆ ತಮ್ಮ ಸೇವಾಕಾರ್ಯವನ್ನು ನೆರವೇರಿಸಿದರು. "ಭಟ್ಟಾಚಾರ್ಯರ (ಶ್ರೀರಾಮಕೃಷ್ಣರ) ಹೆಂಡತಿ ಇಲ್ಲಿದ್ದಾರೆಂದು ಕೇಳಿದ್ದೇವೆ. ಆದರೆ ನಾವು ಒಂದು ದಿನವೂ ಅವರನ್ನು ನೋಡಿಲ್ಲ" ಎಂದು ಅಲ್ಲಿನ ದೇವಸ್ಥಾನದ ಪೂಜಾರಿಗಳು ಹೇಳುವಷ್ಟು ಗುಪ್ತ ಜೀವನ ನಡೆಸಿದರು ಶ್ರೀಮಾತೆ.

ಒಮ್ಮೆ ಶ್ರೀರಾಮಕೃಷ್ಣರು ಹೃದಯನೊಡನೆ, "ಹೃದೂ, ನೋಡು, ಅವಳು ಹೇಗೆ ತನ್ನನ್ನು ಮರೆಸಿಕೊಂಡು ಜೀವನ ನಡೆಸುತ್ತಿದ್ದಾಳೆ. ಸ್ನಾನ ಮಾಡಲೋ ಅಥವಾ ಬೇರೆ ಯಾವುದಕ್ಕಾದರೂ ಹೊರಗೆ ಬರುವುದನ್ನು ಕೂಡ ನಾನು ನೋಡಿಲ್ಲ" ಎಂದು ಅಭಿಮಾನದಿಂದ ಹೇಳಿದರು. ಇದನ್ನು ಕೇಳಿದ ಶ್ರೀಮಾತೆ, "ಅಮ್ಮಾ, ಅವರಿಗೆ ಹಿಡಿಸುವ ರೀತಿಯಲ್ಲಿ ಸಾಧಾರಣವಾಗಿಯೂ, ಸರಳವಾಗಿಯೂ ನನ್ನ ಜೀವನ ಆಗುವಂತೆ ಕೃಪೆತೋರು," ಎಂದು ಜಗನ್ಮಾತೆಯಲ್ಲಿ ಪ್ರಾರ್ಥಿಸಿದರು.

ಶ್ರೀಮಾತೆಯವರು ಚಿಕ್ಕವರಿರುವಾಗ ತಂದೆತಾಯಿಗಳ ಸೇವೆಯನ್ನು ಮಾಡಿದರು. ಅನಂತರ ಪತಿಸೇವಾಪರಾಯಣರಾದರು. ಮುಂದೆ ಅವರೆಡೆಗೆ 'ಅಮ್ಮಾ' ಎಂದು ಬರುತ್ತಿದ್ದ ಅಸಂಖ್ಯ ಮಕ್ಕಳ ಸೇವೆ ಮಾಡಿದರು. ಹೀಗೆ ಅವರ ಇಡೀ ಜೀವನ ಸೇವಾಮಯವಾಗಿತ್ತು.

ಅವರು ಹೇಗೆ ತಮ್ಮ ಮಕ್ಕಳ ಸೇವೆಯನ್ನು ಮಾಡುತ್ತಿದ್ದರು ಎಂಬುದಕ್ಕೆ ಕೆಲವು ಘಟನೆಗಳನ್ನು ಉದಾಹರಿಸಬಹುದು. ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಹೊಸಮನೆ ನಿರ್ಮಾಣವಾದ ಮೇಲೆ ಭಕ್ತರೊಬ್ಬರು ಅವರಿಗಾಗಿ ಒಂದು ಕರೆಯುವ ಹಸುವನ್ನು ದಾನವಾಗಿ ನೀಡಿದರು. ತಮ್ಮ ಖರ್ಚಿನಲ್ಲಿಯೇ ಅದನ್ನು ಕಾಯಲು ಒಬ್ಬ ಹುಡುಗನನ್ನೂ ನೇಮಕ ಮಾಡಿದರು. ಆ ಹುಡುಗ ಒಳ್ಳೆಯ ನಡತೆಯವ, ಮತ್ತು ತುಂಬ ಉತ್ಸಾಹಿ. ಆದರೆ ಕೆಲವೇ ದಿನಗಳಲ್ಲಿ ಅವನ ಮೈಯೆಲ್ಲ ಕಜ್ಜಿಯಾಯಿತು. ಒಂದು ರಾತ್ರಿ ಅವನು ನೋವು ತಡೆಯಲಾಗದೆ ನಿದ್ರೆಯೆ ಇಲ್ಲದೆ ರಾತ್ರಿಯೆಲ್ಲ ಅಳುತಿದ್ದ. ಶ್ರೀಮಾತೆಯವರಿಗೂ ದುಃಖದಿಂದ ರಾತ್ರಿ ನಿದ್ರೆ ಇಲ್ಲವಾಯಿತು. ಮರುದಿನವೇ ಅವರು ಬೇವಿನ ಸೊಪ್ಪು ಮತ್ತು ಅರಿಶಿನ ಇವನ್ನು ಒಟ್ಟಿಗೆ ಅರೆದು ತಾವೇ ಔಷಧಿ ಸಿದ್ಧ ಪಡಿಸಿದರು. ಮತ್ತೆ ಆ ಹುಡುಗನನ್ನು ಕರೆದು ತಮ್ಮ ಮುಂದೆಯೇ ಅದನ್ನು ಮೈಗೆಲ್ಲ ಹಚ್ಚಿಕೊಳ್ಳಬೇಕೆಂದು ಹೇಳಿದರು. ಅವನು ನಿಸ್ಸಂಕೋಚದಿಂದ ತನ್ನ ಸ್ವಂತ ತಾಯಿಯ ಮುಂದೆ ಕುಳಿತಿರುವಂತೆ ಅವರು ಹೇಳಿದಂತೆ ಮಾಡಿದ. ಇದರಿಂದ ಅವನ ಕಜ್ಜಿ ವಾಸಿಯಾಯಿತು. ಅವರೀರ್ವರ ಮುಖವನ್ನು ನೋಡಿ ಮತ್ತು ಸಂಭಾಷಣೆಯನ್ನು ಕೇಳಿದವರಿಗೆ ಅವರು ತಾಯಿ-ಮಗ ಅಲ್ಲ ಎನಿಸುವಂತೆಯೆ ಇರಲಿಲ್ಲ.

ದೇಸ್ರಗ್ರಾಮದ ಹರಿದಾಸ ಬೈರಾಗಿ ಭಕ್ತಿಗೀತೆಗಳನ್ನು ಬಹಳ ಚೆನ್ನಾಗಿ ಹಾಡುತ್ತಿದ್ದ. ಗಿರೀಶ್‌ಚಂದ್ರಘೋಷ್, ಸ್ವಾಮಿ ಶಾರದಾನಂದಜೀ ಮುಂತಾದವರೂ ಅವನ ಪ್ರತಿಭೆಗೆ ತಲೆದೂಗಿದರು. ಆದರೆ ವಯಸ್ಸಾದಂತೆ ಜೀವನಯಾಪನೆ ಕಷ್ಟಸಾಧ್ಯವಾಗತೊಡಗಿತು ಅವನಿಗೆ. ಒಂದು ದಿನ ಬೆಳಿಗ್ಗೆ ಅವನು ಶ್ರೀಮಾತೆಯವರ ಮನೆಗೆ ಭಿಕ್ಷೆ ಬೇಡಲು ಬಂದ. ಅವರು ಅವನಿಗೆ ಎಣ್ಣೆಹಚ್ಚಿಕೊಂಡು ಸ್ನಾನ ಮಾಡಲು ಹೇಳಿದರು. ಅದಾದ ಮೇಲೆ ವರಾಂಡದಲ್ಲಿ ಕೂಡಿಸಿ ಆತ್ಮಾದರದಿಂದ ಮಂಡಕ್ಕಿ ಬೆಲ್ಲ ಪ್ರಸಾದ ಇತ್ಯಾದಿಗಳನ್ನು ತಿನ್ನಲು ಕೊಟ್ಟರು. ಅವನು ತಿನ್ನುತ್ತಿದ್ದಂತೆ ಶ್ರೀಮಾತೆಯವರು ಲೋಕಾಭಿರಾಮವಾಗಿ ಅವನೊಡನೆ ಮಾತನಾಡುತ್ತ ಪಾನ್ ತಯಾರಿಸುತ್ತಿದ್ದರು. ಆಗ ಪ್ರಥಮ ಮಹಾಯುದ್ಧ ನಡೆಯುತ್ತಿತ್ತು, ಎಲ್ಲೆಲ್ಲಿಯೂ ವಸ್ತ್ರದ ಕೊರತೆ. ವೃದ್ಧ ತನಗೆ ಉಟ್ಟುಕೊಳ್ಳಲು ಬಟ್ಟೆಯೆ ಇಲ್ಲವೆಂದು ತಿಳಿಸಿದ. ಶ್ರೀಮಾತೆಯವರು ಸ್ನಾನವಾದ ನಂತರ ತಮ್ಮ ಬಟ್ಟೆಯನ್ನು ಬಿಸಿಲಿಗೆ ಒಣಹಾಕಿದ್ದರು, ಅದಿನ್ನೂ ಹೊಸತು, ಕೇವಲ ಒಂದೆರಡುಬಾರಿ ಉಟ್ಟಿದ್ದರಷ್ಟೆ. ಕೂಡಲೆ ಅವರು ಎದ್ದು ಹೋಗಿ ಅದನ್ನು ತಂದು ಅವನಿಗೆ ಕೊಟ್ಟರು. ಅವನು ಕೃತಜ್ಞತಾಭಾವದಿಂದ ವಿಹ್ವಲನಾಗಿ ಕಣ್ಣೀರು ಸುರಿಸುತ್ತ ಅವರು ಪ್ರೀತಿಯಿಂದಿತ್ತ ವಸ್ತ್ರವನ್ನು ಕಣ್ಣಿಗೊತ್ತಿಕೊಂಡು ಮೆಲ್ಲನೆ ಅಡಿ ಇಡುತ್ತ ಬೀಳ್ಕೊಂಡನು.

ಶ್ರೀಮಾತೆಯವರ ಬದುಕಿನಲ್ಲಿ ಈ ರೀತಿ ಸೇವೆಯೇ ಅವರ ಉಸಿರಾಗಿತ್ತು. ಅನುಪಮವಾದ ಸೇವೆಯ ದ್ವಾರಾ ಪ್ರಪಂಚಕ್ಕೆ ತಮ್ಮನ್ನು ಅವರು ಸಂಬಂಧಿಸಿಕೊಂಡ ರೀತಿ ಅನನ್ಯವಾದುದು. ಶ್ರೀಮಾತೆಯ ಅನುಯಾಯಿಗಳಾದ ನಾವು ನಮ್ಮ ಜೀವನವೂ ಶ್ರೀಮಾತೆಯವರ ಜೀವನದಂತೆ ಸೇವಾಮನೋಭಾವದ ಜೀವನವಾಗಲಿ ಎಂದು ಶ್ರೀಮಾತೆಯವರಲ್ಲಿ ಪ್ರಾರ್ಥಿಸೋಣ ◆

---

■ ಏತಾವಜ್ಜನ್ಮಸಾಫಲ್ಯಂ ದೇಹಿನಾಮಿಹ ದೇಹಿಷು ।
ಪ್ರಾಣೈರರ್ಥೈರ್ಧಿಯಾ ವಾಚಾ ಶ್ರೇಯ
ಏವಾಚರೇತ್ ಸದಾ ॥ (ಭಾಗವತ ೧೦.೨೨.೩೫)

"ಮಾನವನ ಶಕ್ತಿಗಳು, ಸಂಪತ್ತು, ಬುದ್ಧಿ ಮತ್ತು ಮಾತು—ಇವು ಇತರರ ಒಳಿತಿಗಾಗಿ ಉಪಯೋಗಿಸಲ್ಪಟ್ಟಾಗಲೇ ಈ ಪ್ರಪಂಚದಲ್ಲಿ ಅವನ ಜನ್ಮ ಸಾರ್ಥಕವಾದಂತಾಗುತ್ತದೆ." ■